ಶ್ರೀ ಎಂ. ದಿವಾಕರಬಾಬು:- ಮಾನ್ಯ ಅಧ್ಯಕ್ಷರೇ, ದಿನಾಂಕ 15-4-96ಕ್ಕೆ ಸುಮಾರು 250 ಅರ್ಜಿಗಳು ಬಂದಿವೆ ಎಂದು ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ಮತ್ತೆ ಅರ್ಜಿಗಳನ್ನು ಕೊಡುವುದಕ್ಕೆ ದಿನಾಂಕ ಏಕೆ ಮುಂದುವರಿಸಿದ್ದಾರೆ? ಕೆಲವರಿಂದ ಅಪ್ಲಿಕೇಷನ್ಸ್ ಬಂದಿಲ್ಲ ಎಂಬ ಉದ್ದೇಶದಿಂದಲೋ ಅಥವಾ ಮತ್ತೆ ಯಾವ ಕಾರಣ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಸಭಾಪತಿಗಳೇ, ಸಾರ್ವಜನಿಕರಿಗೆ ಸಾಕಷ್ಟು ಅವಕಾಶ ಕೊಡುವ ದೃಷ್ಟಿಯಿಂದ ಸಮಯವನ್ನು ಮುಂದಕ್ಕೆ ಹಾಕಿದ್ದೇವೆ. ಈಗ 271 ಅರ್ಜಿಗಳು ಬಂದಿವೆ. ಹೆಚ್ಚು ಸಮಯಾವಕಾಶ ಕೊಡೋಣ ಎನ್ನತಕ್ಕಂಥ ಉದ್ದೇಶದಿಂದ ಮಾಡಿದೆ. ಅದನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಲಿ.

ವಿಷಯ:- ಬಾದಾಮಿ ತಾಲ್ಲೂಕು ಕೆರೂರು ಪಟ್ಟಣದಲ್ಲಿ ಬಡ ನೇಕಾರರ ಆರ್ಥಿಕ ಸುಧಾರಣೆ.

277 (2037) ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾದಾಮಿ ತಾಲ್ಲೂಕು ಕೆರೂರು ಪಟ್ಟಣದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಶಾಖೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಗಿದೆ?

ಆ) ಅಂದಿನಿಂದ ಇಂದಿನವರೆಗೂ ಯಾವ ವಿಧದಲ್ಲಿ ಬಡ ನೇಕಾರರಿಗೆ ಸೌಲಭ್ಯ ಸಿಕ್ಕಿದೆ, 1992-93, 1993-94 ಹಾಗೂ 1995-96ನೇ ಸಾಲಿನ ವಿವರ ನೀಡುವುದು.

ಇ) ಕೆರೂರು ಪಟ್ಟಣದಲ್ಲಿಯ ಬಡ ನೇಕಾರರ ಆರ್ಥಿಕ ಸುಧಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) 1996-97ನೇ ಸಾಲಿನಲ್ಲಿ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ) 1981

ಆ) ನಿಗಮದಲ್ಲಿ ಆಳವಡಿಸಿಕೊಂಡು ಕಾರ್ಯನಿರತವಾಗಿರುವ ನೇಕಾರರಿಗೆ ಕಚ್ಚಾ ಮಾಲು ಪೂರೈಕೆ ಮಾಡಿ, ಅವರು ಉತ್ಪಾದಿಸಿದ ಬಟ್ಟೆಗಳಿಗೆ ನೇಯ್ಗೆ ಮಜೂರಿ ಪಾವತಿ ಮಾಡಿ, ಮಾರಾಟಕ್ಕೆ ಅಂಗೀಕರಿಸಲಾಗುತ್ತಿದೆ. ಇದಲ್ಲದೆ, ಈ ಕೆಳಗಿನ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ.

1) ಆಧುನೀಕರಿಸಿದ ಮಗ್ಗ ಸಲಕರಣೆಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು.

2) ಮನೆಯಿಲ್ಲದ ನೇಕಾರರಿಗೆ ವಸತಿ ನೀಡುವಿಕೆ ಮತ್ತು ಕಾರ್ಯಾಗಾರ ಒದಗಿಸುವುದು.

3) ಮನೆಯಿರುವ ನೇಕಾರರಿಗೆ ಮನೆಗೆ ಹೊಂದಿಕೊಂಡಂತೆ ಕಾರ್ಯಾಗಾರ ಒದಗಿಸುವಿಕೆ.

4) ಉಳಿತಾಯ ಯೋಜನೆ, ಗುಂಪು ಉಳಿತಾಯ ಮತ್ತು ವಿಮೆ ಯೋಜನೆ ಹಾಗೂ ಗ್ರಾಮೀಣ ಕುಶಲಕರ್ಮಿಗಳಿಗೆ ವಿಮೆ ಯೋಜನೆಯನ್ವಯ ಸೌಲಭ್ಯ ನೀಡುವಿಕೆ.

5) ನೇಕಾರರಿಗೆ ಆಶಾ ಜ್ಯೋತಿ ಯೋಜನೆಯಡಿ ವಿದ್ಯುತ್ ದೀಪ ಸೌಲಭ್ಯ ಒದಗಿಸುವುದು.

1992-93ರಿಂದ 1995-96ನೇ ಸಾಲಿನವರೆಗೆ ವಿತರಿಸಿರುವ ನೂಲು ಬಟ್ಟೆ ಉತ್ಪಾದನೆ ಮತ್ತು ಇವರಿಗೆ ವಿತರಿಸಿದ ಪರಿವರ್ತನಾ ದರ ಇತರೆ ಸೌಲಭ್ಯಗಳನ್ನು ಅನುಬಂಧ–1ರಲ್ಲಿ ತಿಳಿಸಲಾಗಿದೆ.

ಇ) 1.6.1996ರಿಂದ ನಿಗಮ ಮಜೂರಿ ನೇಯ್ಗೆ ದರಗಳನ್ನು ಶೇಕಡ 15ರಷ್ಟು ಹೆಚ್ಚಿಸಿರುತ್ತದೆ (ಇಳಕಲ್ ಸೀರೆಗಳಿಗೆ).

ನಿರಂತರವಾಗಿ ಕಚ್ಚಾಮಾಲು ಪೂರೈಕೆ ಮಾಡಿ, ಬಟ್ಟೆ ಉತ್ಪಾದನೆ ಹೆಚ್ಚಿಸಿ, ಮಾಸಿಕ ಈ) ಕೆರೂರು ಕೇಂದ್ರದಲ್ಲಿ ಹಾಲಿ 63 ಮಗ್ಗಗಳು ಕಾರ್ಯ ನಿರ್ವಹಿಸುತ್ತಿದ್ದು, ಈಗಾಗಲೇ ಮೇಲಿನ ಯೋಜನೆಗಳನ್ವಯ ದೊರೆಯುತ್ತಿರುವ ಸೌಲಭ್ಯಗಳನ್ನು ಮುಂದುವರೆಸುವುದಲ್ಲದೆ, ಈ ಕೇಂದ್ರಕ್ಕೆ 1996-97ನೇ ಸಾಲಿನಲ್ಲಿ ನಿಗಮವು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ರೀತಿ ಇರುತ್ತವೆ:-

1) 24 ಜನ ನೇಕಾರರಿಗೆ ಕೇಂದ್ರ ಸರ್ಕಾರದ ಯೋಜನೆಯನ್ವಯ ವಸತಿ ಹಾಗೂ ಕಾರ್ಯಾಗಾರಗಳನ್ನು ಒದಗಿಸುವುದು. ಈ ಕಾರ್ಯ ಪ್ರಗತಿಯಲ್ಲಿದೆ.
2) 4 ಜನ ನೇಕಾರರಿಗೆ ಕೇಂದ್ರ ಸರ್ಕಾರದ ಯೋಜನೆಯನ್ವಯ ಕಾರ್ಯಾಗಾರಗಳನ್ನು ಒದಗಿಸುವುದು.

ವಿಧಾನಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2037ಕ್ಕೆ ಅನುಬಂಧ.

1992-93ರಿಂದ 1995-96ನೇ ಸಾಲಿನವರೆಗೆ ಕೆರೂರು ಪಟ್ಟಣದ ನೇಕಾರರಿಗೆ ನೀಡಿದ ನೂಲು, ಪರಿವರ್ತನ ಹಣ ಮತ್ತು ಇತರೆ ಸೌಲಭ್ಯಗಳ ವಿವರ

(ಮೌಲ್ಯ ಲಕ್ಷ ರೂಪಾಯಿಗಳಲ್ಲಿ)

ಕ್ರಮ ಸಂಖ್ಯೆ	ವಿವರ	1992-93		1993-94		1994-95		1995-96	
		ಪ್ರಮಾಣ	ಮೌಲ್ಯ	ಪ್ರಮಾಣ	ಮೌಲ್ಯ	ಪ್ರಮಾಣ	ಮೌಲ್ಯ	ಪ್ರಮಾಣ	ಮೌಲ್ಯ
1.	ನೇಕಾರರಿಗೆ ವಿತರಿಸಿದ ನೂಲಿನ ವಿವರ	3217 ಕೆ.ಜಿ.	5.87	9240 ಕೆ.ಜಿ.	8.80	7216 ಕೆ.ಜಿ.	6.18	2948 ಕೆ.ಜಿ.	3.82
2.	ಉತ್ಪಾದಿಸಿದ ಬಟ್ಟೆಯ ಪ್ರಮಾಣ	50048 ಮೀಟರ್ಸ್	8.29	75324 ಮೀಟರ್ಸ್	11.73	57025 ಮೀಟರ್ಸ್	9.00	24668 ಮೀಟರ್ಸ್	5.00
3.	ನೇಕಾರರಿಗೆ ವಿತರಿಸಿದ ಪರಿವರ್ತನಾ ಹಣ.		2.35		3.13		2.05		1.36
4.	ಆಧುನೀಕರಣ ಯೋಜನೆಯಲ್ಲಿ ವಿತರಿಸಿದ ಮಗ್ಗಗಳ ಸಂಖ್ಯೆ ಮತ್ತು ಮೌಲ್ಯ	35	2.03	–	–	–	–	–	–
5.	ಆಶಾಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಒದಗಿಸಿದ ಮನೆಗಳ ಸಂಖ್ಯೆ: ಮತ್ತು ಮೌಲ್ಯ.	–	–	–	–	6 ಸಂಖ್ಯೆ	0.06	–	–

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಪ್ರಶ್ನೆಯಲ್ಲಿ 1981ರಲ್ಲಿ ಈ ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದ್ದೀರಿ. ಆಲ್ಲಿಂದ 1996ರವರೆಗೂ ತಾವು ಎಷ್ಟು ಕುಟುಂಬಗಳಿಗೆ ಇದರ ಪ್ರತಿಫಲವನ್ನು ಕೊಟ್ಟಿದ್ದೀರಿ. ಎರಡನೆಯದಾಗಿ ಕೆರೂರು ಗ್ರಾಮದಲ್ಲಿ ನೇಕಾರಿಕೆಯನ್ನೇ ಅವಲಂಬಿಸಿರತಕ್ಕಂಥ ಎಷ್ಟು ಕುಟುಂಬಗಳು ಇವೆ? ಇನ್ನು ಮೂರನೇದಾಗಿ 1992-93 ರಲ್ಲಿ ತಾವು ನೇಕಾರರಿಗೆ ವಿತರಿಸಿದ ನೂಲಿನ ವಿವರ ಇಲ್ಲ ಆನಂತರ ನೇಕಾರರಿಗೆ ವಿತರಿಸಿದ ಪರಿವರ್ತನೆ ಹಣ ಎಷ್ಟು? ಈಗ ಏನು ತಾವು 5 ಯೋಜನೆಗಳನ್ನು ಮಾಡಿದ್ದೀರಿ, ಆ ಯೋಜನೆಗಳಲ್ಲಿ 1992-93ರಲ್ಲಿ ಕೊಟ್ಟಿರತಕ್ಕಂಥ ಅಂಶ ಕೂಡ ಇದರಲ್ಲಿ ಇಲ್ಲ. ಸುಮಾರು 3217 ಕೆ.ಜಿ. ಕೊಟ್ಟಿದ್ದೀರಿ. ಆ ವ್ಯತ್ಯಾಸ ಇವತ್ತು 1995-96ರಲ್ಲಿ ಕೂಡ ಇಲ್ಲ. ಸರ್ಕಾರದಿಂದ ಕೊಡುವಂತಹ ಸವಲತ್ತು ಆ ಬಡವರಿಗೆ ಕೊಡುವುದರಲ್ಲಿ ನಿರ್ಲಕ್ಷ್ಯ ವಹಿಸಿದೆ ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ಕಾಣುತ್ತದೆ. ಈ ವರ್ಷ ತಾವು ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಪ್ರಗತಿಯಲ್ಲಿ ಸ್ವಲ್ಪ ಕುಂಠಿತವಾಗಿರತಕ್ಕಂಥದ್ದು ನಿಜ. 1995-96ನೇ ಇಸವಿಯಲ್ಲಿ ಕಡಿಮೆ ಆಗಿದೆ. ಕಡಿಮೆ ಆಗಲು ಒಂದು ಕಾರಣ ಕೆರೂರಿನಲ್ಲಿರತಕ್ಕಂಥ ನೇಕಾರರು ಇಳಕಲ್ಲು ಸೀರೆಯನ್ನು ನೇಯತಕ್ಕಂಥ ಒಂದು ವ್ಯವಸ್ಥೆಯಲ್ಲಿದ್ದಾರೆ. ಅವರು ನಮ್ಮವರಿಗಿಂತ ಹೊರಗಡೆಯಿಂದ ಬಂದವರು ಸಾಕಷ್ಟು ಜನ ಇದ್ದಾರೆ, ಅದೂ ಒಂದು ಕಾರಣ. ಈ ವರ್ಷದಲ್ಲಿ ನಾವು ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. 1981ರಲ್ಲಿ ಇದನ್ನು ಆಳವಡಿಸಿಕೊಳ್ಳಲಾಗಿದೆ. ಮಾನ್ಯ ಸದಸ್ಯರು ಅವತ್ತಿನಿಂದ ಏನಾಗಿದೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅವರು 1992-93, 93-94, 94-95ನೇ ಇಸವಿಯ ಮಾಹಿತಿಯನ್ನು ಕೇಳಿರುವುದರಿಂದ ಒದಗಿಸಿದ್ದೇನೆ. ಈ ಹಿಂದಿನ ಮಾಹಿತಿಯನ್ನು ಬೇಕಾದರೆ ನಾನು ಒದಗಿಸಿಕೊಡುತ್ತೇನೆ. ಈಗಾಗಲೇ ನಮ್ಮ ಕೇಂದ್ರ ಸರ್ಕಾರದ ಯೋಜನೆಯಲ್ಲಿ 24 ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯ ತೆಗೆದುಕೊಂಡಿದ್ದೇವೆ. 4 ಜನ ನೇಕಾರರಿಗೆ ಈ ವರ್ಷ ನಾವು ಕಾರ್ಯಾಗಾರಗಳನ್ನು ಮಾಡಲು ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ವಿಷಯ:- ಹೊಸದುರ್ಗ ಪಟ್ಟಣದಲ್ಲಿ ಸಣ್ಣ ಕೈಗಾರಿಕಾ ಶೆಡ್ಡುಗಳ ನಿರ್ಮಾಣ

278 (1820) ಶ್ರೀ ಟಿ.ಎಚ್. ಬಸವರಾಜ್ (ಹೊಸದುರ್ಗ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ಪಟ್ಟಣದಲ್ಲಿ ನಿರ್ಮಿಸಿರುವ ಕೈಗಾರಿಕಾ ಶೆಡ್ಡುಗಳ ವಿತರಣೆ ಯಾವ ದಿನಾಂಕದಿಂದ ಆರಂಭವಾಗಿದೆ?

ಆ) ಈ ಕೈಗಾರಿಕಾ ಶೆಡ್ಡುಗಳ ಮತ್ತು ಪ್ರದೇಶದ ವಿಸ್ತೀರ್ಣವೆಷ್ಟು?

ಇ) ಖಾಲಿ ಪ್ರದೇಶವನ್ನು ಯಾರಿಗಾದರೂ ಗುತ್ತಿಗೆ ಆಧಾರದ ಮೇಲೆ ಕೊಡಲಾಗಿದೆಯೇ ಹಾಗಿದ್ದಲ್ಲಿ ಯಾವ ಉದ್ದೇಶಕ್ಕಾಗಿ ಕೊಡಲಾಗಿದೆ?